ಅಸಲು ದಾವಾ ಸಂಖ್ಯೆ 262 – 2018 ಡಿ.ಡಬ್ಲ್ಯೂ- 1

ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾದ ದಿನಾಂಕ 20.07.2023.

ಪಾಟೀ ಸವಾಲು ಃ ಶ್ರೀ ಜಿ.ಎನ್.ಎಂ ನ್ಯಾಯಾವಾದಿಗಳಿಂದಃ

ನಾನು 6 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನ್ನ ತಾಯಿ ನಿಂಗಮ್ಮರವರು ಕರೀಗೌಡ ಮತ್ತು ಬೋರಮ್ಮರವರ ಒಬ್ಬಳೇ ಮಗಳಾಗಿರುತ್ತಾಳೆ ಎಂದರೆ ಸರಿ. ದಾವಾ ಆಸ್ತಿಗಳು ನಮ್ಮ ಅಜ್ಜಿ ಬೋರಮ್ಮರವರು ಖರೀದಿಮಾಡಿರುವ ಆಸ್ತಿಗಳಾಗಿರುತ್ತವೆ. ದಾವಾ ಆಸ್ತಿಗಳು ನಮ್ಮ ಅಜ್ಜಿ ಬೋರಮ್ಮ ನವರ ಸ್ವಯಾರ್ಜಿತ ಆಸ್ತಿಯಾಗಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ನಮ್ಮ ಅಜ್ಜಿಗೆ ಅವರ ತಂದೆ ತಾಯಿಯಿಂದ ಸ್ತ್ರೀದನವಾಗಿ ಬಂದ ಆಸ್ತಿಗಳಾಗಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿ ಸಂಖ್ಯೆ 1 ನ್ನು ತನ್ನ ತಾತ ಕರೀಗೌಡ ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ.ದಾವಾ ಆಸ್ತಿ ಸಂಖ್ಯೆ 4 ನನ್ನ ತಾತನಿಗೆ ಪತ್ರಾರ್ಜಿತ ಮೂಲಕ ಬಂದಿರುತ್ತದೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ನಮ್ಮ ತಾತನಿಗೆ ಸೇರಿರುವುದರಿಂದ ನಮ್ಮ ತಾಯಿಗೆ ಸಂಪೂರ್ಣ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ. ನನ್ನ ಸಹೋದರ ಸಹೋದರರಿಗೆ ಆಸ್ತಿಯನ್ನು ಭಾಗಕೊಡಬೇಕೆಂಬ ಉದ್ದೇಶದಿಂದ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಸಾ. ಹೇ. ಬೆ. ಮಾಡಿಸಲಾಯಿತು.

ಓ.ಹೇ.ಕೇ.ಸ.ಇದೆ

ಅಪರ ಸಿವಿಲ್ ನ್ಯಾಯಾಧೀಶರು
ನಾಗಮಂಗಲ